**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ</u>**
**<u>ಇವರ ನ್ಯಾಯಾಲಯದಲ್ಲಿ</u>**
<u>ಸಿ.ಸಿ.ನಂಬರ್ **7393-2023**</u>

**ಡಿ.ಡಬ್ಲು-1**

ಹೆಸರು : ಅಂಬರೀಶ್
ತಂದೆಯ ಹೆಸರು : ವೆಂಕಟರಮಣಪ್ಪ
ವಯಸ್ಸು : 44 ವರ್ಷಗಳು
ಉದ್ಯೋಗ : ಚಾಲಕ
ವಾಸ ಸ್ಥಳ : ಕುರುಬರಹಳ್ಳಿ, ಹೊಸಕೋಟೆ

**<u>ದಿ: 05.08.2026 ರಂದು ಆರೋಪಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಆರೋಪಿ ಪರವಾಗಿ ಶ್ರೀ ಆರ್.ಎನ್., ವಕೀಲರಿಂದ :</u>**

ನಾನು ಪಿರ್ಯಾದುದಾರರಿಂದ ಪಡೆದುಕೊಂಡಿದ್ದ ರೂ.70,000/- ಹಣವನ್ನು ರೂ.10,000/- ಸೇರಿಸಿ ಒಟ್ಟು ರೂ.80,000/- ಹಣವನ್ನು ಪಿರ್ಯಾದುದಾರರ ನಿರ್ದೇಶನದಂತೆ ಪಿರ್ಯಾದುದಾರರ ಹೆಂಡತಿಯಾದ ಲಲಿತಾ ರವರ ಬ್ಯಾಂಕ್ ಖಾತೆಗೆ ಜಮಾಮಾಡಿರುತ್ತೇನೆ. ಆ ರೀತಿ ನಾನು ಪಿರ್ಯಾದುದಾರರಿಗೆ ಸಂಪೂರ್ಣ ಹಣವನ್ನು ಮರುಪಾವತಿಸಿದ ನಂತರವು ಪಿರ್ಯಾದುದಾರರು ನನ್ನ ಕಛೇರಿಗೆ ಬಂದು ನನಗೆ ಹೆಚ್ಚಗಿನ ಹಣವನ್ನು ನೀಡುವಂತೆ ಬಲವಂತ ಮಾಡುತ್ತಿದ್ದರು. ನಾನು ಪಿರ್ಯಾದುದಾರರಿಗೆ ಯಾವುದೇ ಹಣ ಬಾಕಿ ನೀಡಲು ಇರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ನಿಪಿ.1 ಚೆಕ್ಕನ್ನು ಪಿರ್ಯಾದುದಾರರಿಗೆ ಯಾವುದೇ ಹಣದ ಮರುಪಾವತಿ ಸಲುವಾಗಿ ನೀಡಿರುವುದಿಲ್ಲ ಮತ್ತು ಪಿರ್ಯಾದುದಾರರು ನನ್ನ ಕಛೇರಿಗೆ ಬಂದಾಗ ನಾನು ಬರೆದಿಟ್ಟದ ನಿಪಿ.1 ಚೆಕ್ಕನ್ನು ತೆಗೆದುಕೊಂಡು ಹೋಗಿ ದುರುಪಯೋಗಪಡಿಸಿಕೊಂಡಿರುತ್ತಾರೆ. ಆದ್ದರಿಂದ ಪಿರ್ಯಾದನ್ನು ವಜಾಗೊಳಿಸಿ ನನ್ನನ್ನು ನಿರಪರಾಧಿ ಎಂದು ಘೋಷಿಸಬೇಕೆಂದು ಪ್ರಾರ್ಥನೆ.

**2.** ದಿನಾಂಕ **15-06-2022** ರಂದು ಹಣ ಜಮಾ ಮಾಡಿದ ಕುರಿತು ನೀಡಿದ ಬ್ಯಾಂಕ್ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ.**1** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀಯುತ ಕೆ.ಕೆ.ಪಿ., ವಕೀಲರಿಂದಃ**

ನಾನು ಪಿರ್ಯಾದಿನಲ್ಲಿ ಕಾಣಿಸಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಪಿರ್ಯಾದಿನಲ್ಲಿ ಕಾಣಿಸಿರುವ ದೂರುವಾಣಿ ಸಂಖ್ಯೆಯು ನನ್ನದಾಗಿರುತ್ತದೆ ಎಂದರೆ ಸರಿ. ನಿಪಿ.**1** ಚೆಕ್ಕು ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ ಎಂದರೆ ಸರಿ.

**2.** ನನಗೆ ಪಿರ್ಯಾದುದಾರರು ಹಣದ ವ್ಯವಹಾರ ಮಾಡಿದ ದಿನದಿಂದ ಪರಿಚಯವಿರುತ್ತಾರೆ. ನಾನು ಪ್ರಸ್ತುತ ಪ್ರಕರಣದ ವ್ಯವಹಾರದ ಪೂರ್ವದಲ್ಲಿ ಪಿರ್ಯಾದುದಾರರ ಬಳಿ ಹಲವು ಬಾರಿ ಹಣ ತೆಗೆದುಕೊಳ್ಳುವುದು ಮತ್ತು ವಾಪಸ್ಸು ನೀಡುವುದನ್ನು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಆ ರೀತಿ ಒಂದು ಬಾರಿ ವ್ಯವಹಾರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.**1** ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದ ನಂತರ ನಿಪಿ.**1** ಚೆಕ್ಕು ಅಮಾನ್ಯಗೊಂಡ ಕುರಿತು ನನ್ನ ಮೊಬೈಲ್ ಸಂಖ್ಯೆಗೆ ಸಂದೇಶ ಬಂದಿರುತ್ತದೆ. ನಾನು ಪಿರ್ಯಾದುದಾರರು ವಕೀಲರ ಮೂಲಕ ನೀಡಿದ ನೋಟಿಸ್ಸನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ನೋಟಿಸ್ಸು ಪಡೆದುಕೊಳ್ಳುವ ಪೂರ್ವದಲ್ಲಿ ಪಿರ್ಯಾದುದಾರರನ್ನು ಭೇಟಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಪಡೆದುಕೊಂಡಿದ್ದೇನೆ ಎಂದು ಹೇಳುವ ನೋಟಿಸ್ಸಿಗೆ ಪ್ರತ್ಯುತ್ತರ ನೀಡಿರುತ್ತೇನೆ. ಆ ರೀತಿ ನೀವು ನೀಡಿದ್ದೇನೆ ಎಂದು ಹೇಳುವ ಪ್ರತ್ಯುತ್ತರ ನೋಟಿಸ್ಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಪಿರ್ಯಾದುದಾರರು ನೀಡಿದ ನೋಟಿಸ್ಸನ್ನು ಸ್ವೀಕರಿಸಿಕೊಂಡಿರುವುದಿಲ್ಲ ಮತ್ತು ತಿರಸ್ಕರಿಸಿರುತ್ತೇನೆ ಹಾಗೂ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**3.** ಪಿರ್ಯಾದುದಾರರ ಸಂಬಂಧಿಕರು ನಮ್ಮ ಊರಿನಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪಿರ್ಯಾದುದಾರರಿಂದ ಹಣ ಪಡೆದುಕೊಂಡ ಮೇರೆಗೆ ಪಿರ್ಯಾದುದಾರರು ಪರಿಚಯವಾಗಿರುತ್ತಾರೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ಒಳ್ಳೆಯ ಸಂಬಂಧವಿತ್ತು ಎಂದರೆ ಸರಿ. ನಾನು ಪಿರ್ಯಾದುದಾರರಿಂದ ರೂ.**70,000/-** ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವೆರದು ಸದರಿ ಹಣವನ್ನು ಮರುಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ **2022**ನೇ ಸಾಲಿನಲ್ಲಿ ಹಣವನ್ನು ಮರುಪಾವತಿಸಿರುತ್ತೇನೆ. ಆ ರೀತಿ ಹಣವನ್ನು ಮರುಪಾವತಿಸಿದ್ದೇನೆ ಎಂದು ಹೇಳುವ ದಿನಾಂಕ ನನಗೆ ನೆನಪಿಲ್ಲ. ನಿಡಿ.**1** ರಲ್ಲಿ ನಮೂದಿಸಿರುವ ಹಣವನ್ನು ಪಿರ್ಯಾದುದಾರರ ಹೆಂಡತಿ ಖಾತೆಗೆ ಜಮಾಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಆ ರೀತಿ ಪಿರ್ಯಾದುದಾರರು ತನ್ನ ಹೆಂಡತಿ ಖಾತೆಗೆ ಜಮಾಮಾಡುವಂತೆ ತಿಳಿಸಿದ್ದ ಮೇರೆಗೆ ಜಮಾಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ.**12** ಮತ್ತು ಪಿರ್ಯಾದುದಾರರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಡಿ.**1** ರಲ್ಲಿರುವ ಹಣವನ್ನು ಪಿರ್ಯಾದುದಾರರ ಬ್ಯಾಂಕ್ ಖಾತೆಗೆ ಜಮಾಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪಿರ್ಯಾದುದಾರರ ಹೆಂಡತಿ ಖಾತೆಗೆ ಜಮಾಮಾಡಿರುತ್ತೇನೆ ಎಂದು ನುಡಿಯುತ್ತಾರೆ. **2022**ನೇ ಸಾಲಿನಲ್ಲಿ ನಾನು ಪಿರ್ಯಾದುದಾರರ ಹೆಂಡತಿಯ ಬಳಿ ಮಾಡಿದ್ದ ವ್ಯವಹಾರದ ಸಲುವಾಗಿ ನಿಡಿ.**1** ಹಣವನ್ನು ಪಿರ್ಯಾದುದಾರ ಹೆಂಡತಿಗೆ ವಾಪಸ್ಸು ನೀಡಿರುತ್ತೇನೆ ಮತ್ತು ಸದರಿ ಹಣಕ್ಕೆ ಮತ್ತು ಪ್ರಸ್ತುತ ಪ್ರಕರಣಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದ ಹಣದ ವ್ಯವಹಾರದ ಪೂರ್ವದಲ್ಲಿ ಪಿರ್ಯಾದುದಾರರೊಂದಿಗೆ ಮಾಡಿದ ಹಣದ ವ್ಯವಹಾರದ ಕುರಿತಾದ ಹಣವು ನಿಡಿ.**1** ಆಗಿರುತ್ತದೆ ಎಂದರೆ ಸರಿಯಲ್ಲ.

**4.** ನಾನು ಪಿರ್ಯಾದುದಾರರೊಂದಿಗೆ ಪ್ರಥಮ ಬಾರಿಗೆ ಮಾಡಿದ್ದ ಹಣದ ವ್ಯವಹಾರವನ್ನು ಬ್ಯಾಂಕ್ ಮೂಲಕ ಮರುಪಾವತಿಸಿರುತ್ತೇನೆ. ಸದರಿ ಬ್ಯಾಂಕ್ ಮೂಲಕ ಮರುಪಾವತಿಸಿದ್ದ ಹಣವು ನಿಡಿ.**1** ಆಗಿರುತ್ತದೆ ಎಂದರೆ ಸರಿ. ನಿಡಿ.**1** ಮತ್ತು ಪ್ರಸ್ತುತ ಪ್ರಕರಣಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪಿರ್ಯಾದುದಾರರು ಯಾವ ದಿನಾಂಕದಂದು ನಿಪಿ.**1** ಚೆಕ್ಕನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯದಿಂದ ನೋಟಿಸ್ಸು ಬಂದ ನಂತರ ನಿಪಿ.**1** ಚೆಕ್ಕು ಕಳೆದುಹೋದ ಕುರಿತು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.**1** ಚೆಕ್ಕು ಅಮಾನ್ಯಗೊಂಡ ಕುರಿತು ನನ್ನ ಮೊಬೈಲಿಗೆ ಸಂದೇಶ ಬಂದ ವಿಚಾರವು ಪಿರ್ಯಾದುದಾರರಿಗೆ ಸಂಬಂಧಿಸಿದ್ದೇ ಎಂದು ನನಗೆ ಗೊತ್ತಿರಲಿಲ್ಲ. ಪಿರ್ಯಾದುದಾರರು ನಿಪಿ.**1** ಚೆಕ್ಕನ್ನು ದುರುಪಯೋಗಪಡಿಸಿಕೊಂಡ ಕುರಿತು ತಿಳಿದು ಬಂದ ನಂತರ ಪಿರ್ಯಾದುದಾರರ ವಿರುದ್ಧ ಪೋಲಿಸ್ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಿಪಿ.**1** ರಲ್ಲಿ

ಬರೆದಿರುವ ದಿನಾಂಕ ಮತ್ತು ಬರವಣಿಗೆಗಳು ನನ್ನದಾಗಿರುತ್ತದೆ ಎಂದರೆ ಸರಿ. ನಾನು ಪಿರ್ಯಾದುದಾರರಿಗೆ ಮೋಸ ಮಾಡುವ ಸಲುವಾಗಿ ನಿಪಿ.1 ರಲ್ಲಿ ಪಿರ್ಯಾದುದಾರರ ಹೆಸರನ್ನು ನಮೂದಿಸದೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿನ ದಿನಾಂಕ ಮತ್ತು ನಿಡಿ.1 ರಲ್ಲಿನ ದಿನಾಂಕಗಳು ಬೇರೆ ಬೇರೆ ಎಂದರೆ ಸಾಕ್ಷಿಯು ನಿಪಿ.1 ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದುದಾರರಿಂದ ಪಡೆದುಕೊಂಡಿದ್ದ ಹಣವನ್ನು ಮರುಪಾವತಿಸ ಬೇಕಾಗುತ್ತದೆ ಎನ್ನುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕನ್ನು ಪಿರ್ಯಾದುದಾರರಿಂದ ಪಡೆದುಕೊಂಡಿದ್ದ ಹಣದ ಮರುಪಾವತಿ ಸಲುವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ಹೊಸಕೋಟೆ.**